KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಏಪ್ರಿಲ್ ೨೮, ೨೦೧೧, (ವೈಶಾಖ ೮, ಶಕ ವರ್ಷ ೧೯೩೩)	ಸಂಚಿಕೆ ೧೭

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE AND INDUSTRIES SECRETARIAT

Sub: Approval to the Project Proposal of M/s. Milltec Machinery Pvt. Ltd., to establish a "Manufacture of Electronic Weighing Machine Paddy Cleaner, Stone Separator, Hulling, De-Hesker, Thick-Thin Grader, Polishing (Rice Whitener), Final Polisher, Rice Grader, Giro Shifter-Sift, Indent Cylinder" at Narasapura Industrial Area, Kolar District.

Read: Proceedings of the 24th State High Level Clearance Committee (SHLCC) Meeting held on 24-01-2011.

Preamble:

M/s Milltec Machinery Pvt. Ltd., proposes to establish a "manufacture of Electronic Weighing Machine, Paddy Clearner, Stone Separator, Hulling, De-Husker, Thick-Thin Grader, Polishing (Rice Whitener), Final Polisher, Rice Grader, Giro Shifter-sift, Indent Cylinder" at Narasapura Industrial Area, Kolar District, with an investment of Rs. 96.80 Crores, generating employment to about 1060 persons.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in the 24th Meeting held on 24-01-2011, in all aspects.

Hence the following Order.

Government Order No.: CI 53 SPI 2011, Bangalore, Dated: 23-02-2011

Government is pleased to accord in principle approval to the Project proposal of M/s. Milltec Machinery Pvt. Ltd., to establish a "Manufacture of Electronic Weighing Machine, Paddy Clearner, Stone Separator, Hulling, De-Husker, Thick-Thin Grader, Polishing (Rice Whitener), Final Polisher, Rice Grader, Giro Shifter-Sift, indent Cylinder" at Narasapura Industrial Area, Kolar District. with an investment of Rs. 96.80 Crores, generating exmployment to about 1060 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 15 acres to be allotted by KIADB in Narsapura Industrial Area, Kolar District.
2. **Water:** 3 KLPD to be supplied by KIADB.
3. **Power:** 1200 KVA to be serviced by BESCOM.
4. **Incentives & Concessions** As per applicable Industrial Policy of the State

GENERAL TERMS AND CONDITIONS:

1. **Environment:** The promoters to obtain CFE and CFO from KSPCB and environmental clearance from MOEF, GOI.
2. **Employment:** The company shall prepare a plan for development of Human Resources required for the project, train local people and provide employment to these trained local youth and comply with the provisions of industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.

3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the commissioner for I.D. & Director of Industries and Commerce for monitoring.
4. **Social Infrastructure Development:** The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
5. **Others:**
   a) The project proponents shall provide employment to at least one member of the family of each land looser if the land is acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

PR No. 584

A.V. Srinivasa Dikshit
Desk Officer (Technical Cell)
Commerce & Industries Department

COMMERCE AND INDUSTRIES SECRETARIAT

Sub: Approval to the Project Proposal of M/s. Suraj Inn Pvt. Ltd., to establish a "Service Apartment" at Ambalipura Village, Varthur Hobli, Bangalore East Taluk, Bangalore Urban District.

Read: Proceedings of the 24th State High Level Clearance Committee (SHLCC) Meeting held on 24-01-2011.

Preamble:

M/s Suraj Inn Pvt. Ltd., proposes to establish a "Service Apartment" at Ambalipura Village, varthur Hobli, Bangalore East Taluk, Bangalore Urban District, with an investment of Rs. 124.46 Crores, generating employment to about 1650 persons.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in the 24th Meeting held on 24-01-2011, in all aspects.

Hence the following Order.

Government Order No. CI 52 SPI 2011, Bangalore, Dated: 23-02-2011

Government is pleased to accord in principle approval to the Project proposal of M/s. Suraj Inn Pvt. Ltd., to establish a "Service Apartment" at Ambalipura Village, Varthur Hobli, Bangalore East Taluk, Bangalore Urban District. with an investment of Rs. 124.46 Crores, generating employment to about 1650 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 1.83 acres of own land in Sy. Nos. 46/2P, 27/1, 48/1 and 48/2, Ambalipura Village, Varthur Hobli, Bangalore East Taluk, Bangalore Urban District, Subject to obtaining change of land use and conversion of the same for industrial use.
2. **Water:** 1000 KLPD from own source.
3. **Power:** 1. MW to be serviced by BESCOM.
4. **Incentives & Concessions** As per applicable Tourism Policy of the State

GENERAL TERMS AND CONDITIONS:

1. **Environment:** The promoters to obtain CFE and CFO from KSPCB and environmental clearance from MOEF, GOI.
2. **Employment:** The company shall prepare a plan for development of Human Resources required for the project, train local people and provide employment to these trained local youth and comply with the provisions of industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the commissioner for I.D. & Director of Industries and Commerce for monitoring.

4. **Social Infrastructure Development:** The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

5. **Others:**
   a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

PR No. 585

A.V. Srinivasa Dikshit
Desk Officer (Technical Cell)
Commerce & Industries Department

ಕಾರ್ಮಿಕ ಸಚಿವಾಲಯ

ವಿಷಯ : ಬೆಂಗಳೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿನ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ಆಡಳಿತ ಪರಿಷತ್ತನ್ನು ರಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಕಾಇ 193 ಇಟಿಐ 2010, ದಿನಾಂಕ 26-10-2010.

2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ : ಉತಇ/ತರಬೇತಿ/ಯೋ-1/ವಿವ-85/2009-10, ದಿನಾಂಕ 10-01-2011.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಮತ್ತು ಅವುಗಳಿಗೆ ಆಡಳಿತ ಪರಿಷತ್ತನ್ನು ರಚಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮುಖ್ಯ ಕಾರ್ಯದರ್ಶಿಗಳು ಅನುಮೋದಿಸಿರುವಂತೆ ಆಡಳಿತ ಪರಿಷತ್ತಿನಲ್ಲಿ 3 ಕೇಂದ್ರ ಸರ್ಕಾರದ ಪ್ರತಿನಿಧಿಗಳನ್ನು ಸೇರಿಸುವಂತೆ ತಿಳಿಸಿ ಮಾರ್ಪಡಿತ ಪ್ರಸ್ತಾವನೆ ಸಲ್ಲಿಸಿರುವರು.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಪರಿಷ್ಕೃತ ಆಡಳಿತ ಪರಿಷತ್ತನ್ನು ರಚಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 193 ಇಟಿಐ 2010, ಬೆಂಗಳೂರು, ದಿನಾಂಕ: 19-02-2011

ಸರ್ಕಾರಿ ಆದೇಶ ಸಂಖ್ಯೆ : ಕಾಇ 193 ಇಟಿಐ 2010, ದಿನಾಂಕ 26-10-2010 ರಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ರಚಿಸಲಾಗಿರುವ ಆಡಳಿತ ಪರಿಷತ್ತನ್ನು ಈ ಕೆಳಗಿನಂತೆ ಪರಿಷ್ಕರಿಸಿ ರಚಿಸಲಾಗಿದೆ.

ಕ್ರ.ಸಂ.	ಪದನಾಮ	
1	ಅಧ್ಯಕ್ಷರು	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2	ಉಪಾಧ್ಯಕ್ಷರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
3	ಸದಸ್ಯ ಕಾರ್ಯದರ್ಶಿಗಳು	ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
	ಸದಸ್ಯರು	
4,5,6	ಕೇಂದ್ರ ಸರ್ಕಾರ	ಡಿಜಿಇಟಿ ನವದೆಹಲಿ ಇವರ ವತಿಯಿಂದ ಮೂವರು ಪ್ರತಿನಿಧಿಗಳು
7	ಆರ್ಥಿಕ ಇಲಾಖೆ	ಒಬ್ಬ ಪ್ರತಿನಿಧಿ
8,9	ಉದ್ಯೋಗ ಮತ್ತು ತರಬೇತಿ	ಇಬ್ಬರು ಜಂಟಿ ನಿರ್ದೇಶಕರು
10,11	ಜಿಟಿಜೆಡ್-ಐಎಸ್	ಇಬ್ಬರು ಪ್ರತಿನಿಧಿಗಳು
12	ನಿರ್ದೇಶಕರು, ತಾಂತ್ರಿಕ ಶಿಕ್ಷಣ	ಒಬ್ಬ ಪ್ರತಿನಿಧಿ
	ಕೈಗಾರಿಕೋದ್ಯಮಗಳ ಸಂಘ ಸಂಸ್ಥೆಗಳು	
13	ಬಿಸಿಐಸಿ	ಒಬ್ಬ ಪ್ರತಿನಿಧಿ
14	ಎಫ್‌ಕೆಸಿಸಿಐ	ಒಬ್ಬ ಪ್ರತಿನಿಧಿ
15	ಸಿಐಐ	ಒಬ್ಬ ಪ್ರತಿನಿಧಿ
	ಕೈಗಾರಿಕಾ ಮತ್ತು ತಾಂತ್ರಿಕ ತರಬೇತಿ ಸಂಸ್ಥೆಗಳು	
16	ಬಾಷ್	ಒಬ್ಬ ಪ್ರತಿನಿಧಿ
17	ಜಿಟಿಟಿಸಿ	ಒಬ್ಬ ಪ್ರತಿನಿಧಿ
18	ಬಿಹೆಚ್‌ಇಎಲ್	ಒಬ್ಬ ಪ್ರತಿನಿಧಿ

19	ಹೆಚ್ಎಎಲ್	ಒಬ್ಬ ಪ್ರತಿನಿಧಿ
20	ಟಿಟಿಟಿಐ	ಒಬ್ಬ ಪ್ರತಿನಿಧಿ
21	ಎನ್‌ಟಿಟಿಎಫ್	ಒಬ್ಬ ಪ್ರತಿನಿಧಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಭಾನುಮತಿ (ಪ್ರ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 561

ಕಾರ್ಮಿಕ ಸಚಿವಾಲಯ

ವಿಷಯ : ಗುಲ್ಬರ್ಗಾದ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಚಾಲನಾ ಸಮಿತಿ (Steering Committee) ರಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಕಾಇ 193 ಇಟಿಐ 2010, ದಿನಾಂಕ 26–10–2010.

2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ : ಉತಇ/ತರಬೇತಿ/ಯೋ–1/ವಿವ–85/2009–10, ದಿನಾಂಕ 10–01–2011.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬೆಂಗಳುರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ಚಾಲನಾ ಸಮಿತಿಯನ್ನು (Steering Committee) ರಚಿಸಲು ಪ್ರಸ್ತಾವನೆ ಸಲ್ಲಿಸಿರುವರು.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಗುಲ್ಬರ್ಗಾದ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಚಾಲನಾ ಸಮಿತಿಯನ್ನು (Steering Committee) ರಚಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 193 ಇಟಿಐ 2010(2), ಬೆಂಗಳೂರು, ದಿನಾಂಕ: 19–02–2011

ಗುಲ್ಬರ್ಗಾದ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಈ ಕೆಳಕಂಡಂತಹ ಸದಸ್ಯರುಗಳನ್ನುಳ್ಳ ಚಾಲನಾ ಸಮಿತಿಯನ್ನು (Steering Committee) ತಕ್ಷಣದಿಂದಲೇ ಜಾರಿಗೆ ಬರುವಂತೆ ರಚಿಸಿ ಆದೇಶ ಹೊರಡಿಸಲಾಗಿದೆ.

ಕ್ರ.ಸಂ.	ಪದನಾಮ	
1	ಅಧ್ಯಕ್ಷರು	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2	ಉಪಾಧ್ಯಕ್ಷರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
3	ಸದಸ್ಯ ಕಾರ್ಯದರ್ಶಿಗಳು	ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
4	ಸದಸ್ಯರು	ಉಪ ಆಯುಕ್ತರು, ಗುಲ್ಬರ್ಗಾ
5	ಸದಸ್ಯರು	ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಗುಲ್ಬರ್ಗಾ ವಿಭಾಗ
6	ಸದಸ್ಯರು	ನಿರ್ದೇಶಕರು, ಕೆಜಿಎಂಎಸ್‌ಡಿಸಿ, ಗುಲ್ಬರ್ಗಾ
7	ಸದಸ್ಯರು	ನಿರ್ದೇಶಕರು, ಎಫ್‌ಟಿಐ, ಬೆಂಗಳೂರು
8	ಸದಸ್ಯರು	ನಿರ್ದೇಶಕರು, ಅಪೆಕ್ಸ್–ಹೈಟೆಕ್ ಇನ್‌ಸ್ಟಿಟ್ಯೂಟ್, ಬೆಂಗಳೂರು
9	ಸದಸ್ಯರು	ಇಬ್ಬರು ಪ್ರತಿನಿಧಿಗಳು ಜಿಟಿಜೆಡ್–ಐಎಸ್
10	ಸದಸ್ಯರು	ಹೈದರಾಬಾದ್–ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್‌ನ ಪ್ರತಿನಿಧಿ
11	ಸದಸ್ಯರು	ಆಲ್ಸ್ಟಾಮ್‌ನ ಪ್ರತಿನಿಧಿ
12	ಸದಸ್ಯರು	ವಾಸವದತ್ತಾ ಸಿಮೆಂಟ್‌ನ ಪ್ರತಿನಿಧಿ
13	ಸದಸ್ಯರು	ಪ್ರಧಾನ ವ್ಯವಸ್ಥಾಪಕರು, ಡಿಐಸಿ, ಗುಲ್ಬರ್ಗಾ

1) ಅಲ್ಲದೇ, ಅವಶ್ಯಕತೆ ಇದ್ದಾಗ ಕೈಗಾರಿಕೆಗಳ ಪ್ರತಿನಿಧಿಗಳನ್ನು ಆಹ್ವಾನಿಸಲು ಮತ್ತು ಗರಿಷ್ಠ ಇಬ್ಬರು ಗಣ್ಯ ವ್ಯಕ್ತಿ/ಸಂಸ್ಥೆಗಳನ್ನು ಆಹ್ವಾನಿಸಲು ಅವಕಾಶ ಕಲ್ಪಿಸಿದೆ.

2) ತನ್ನ ಪರವಾಗಿ ಸಭೆ ನಡೆಸಲು ಉಪಾಧ್ಯಕ್ಷರಿಗೆ ಅಧ್ಯಕ್ಷರು ಪ್ರಾಧಿಕಾರವನ್ನು ನೀಡಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಭಾನುಮತಿ (ಪ್ರ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 562

ಕಾರ್ಮಿಕ ಸಚಿವಾಲಯ

ವಿಷಯ : ಬೆಂಗಳೂರಿನ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಚಾಲನಾ ಸಮಿತಿ (Steering Committee) ರಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಕಾಇ 193 ಇಟಿಐ 2010, ದಿನಾಂಕ 26–10–2010.

2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ : ಉತಇ/ತರಬೇತಿ/ಯೋ–1/ವಿವ–85/2009–10, ದಿನಾಂಕ 10–01–2011.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ ಚಾಲನಾ ಸಮಿತಿಯನ್ನು (Steering Committee) ರಚಿಸಲು ಪ್ರಸ್ತಾವನೆ ಸಲ್ಲಿಸಿರುವರು.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೆಂಗಳೂರಿನ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಚಾಲನಾ ಸಮಿತಿಯನ್ನು (Steering Committee) ರಚಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 193 ಇಟಿಐ 2010(1), ಬೆಂಗಳೂರು, ದಿನಾಂಕ: 19–02–2011

ಬೆಂಗಳೂರಿನ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಈ ಕೆಳಕಂಡಂತಹ ಸದಸ್ಯರುಗಳನ್ನುಳ್ಳ ಚಾಲನಾ ಸಮಿತಿಯನ್ನು (Steering Committee) ತಕ್ಷಣದಿಂದಲೇ ಜಾರಿಗೆ ಬರುವಂತೆ ರಚಿಸಿ ಆದೇಶ ಹೊರಡಿಸಲಾಗಿದೆ.

ಕ್ರ.ಸಂ.	ಪದನಾಮ	
1	ಅಧ್ಯಕ್ಷರು	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2	ಉಪಾಧ್ಯಕ್ಷರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
3	ಸದಸ್ಯ ಕಾರ್ಯದರ್ಶಿಗಳು	ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
4	ಸದಸ್ಯರು	ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಬೆಂಗಳೂರು ವಿಭಾಗ
5	ಸದಸ್ಯರು	ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ, ಬೆಂಗಳೂರು
6	ಸದಸ್ಯರು	ನಿರ್ದೇಶಕರು, ಕೆಜಿಎಂಎಸ್‌ಡಿಸಿ, ಬೆಂಗಳೂರು
7	ಸದಸ್ಯರು	ನಿರ್ದೇಶಕರು, ಎಫ್‌ಟಿಐ, ಬೆಂಗಳೂರು
8	ಸದಸ್ಯರು	ನಿರ್ದೇಶಕರು, ಅಪೆಕ್ಸ್–ಹೈಟೆಕ್ ಇನ್‌ಸ್ಟಿಟ್ಯೂಟ್, ಬೆಂಗಳೂರು
9	ಸದಸ್ಯರು	ಇಬ್ಬರು ಪ್ರತಿನಿಧಿಗಳು ಜಿಟಿಜೆಡ್–ಐಎಸ್
10	ಸದಸ್ಯರು	ಬಿಸಿಐಸಿ ಯ ಪ್ರತಿನಿಧಿ
11	ಸದಸ್ಯರು	ಸಿಐಐ ಯ ಪ್ರತಿನಿಧಿ
12	ಸದಸ್ಯರು	ಬಾಷ್‌ನ ಪ್ರತಿನಿಧಿ
13	ಸದಸ್ಯರು	ಎನ್‌ಟಿಟಿಎಫ್‌ನ ಪ್ರತಿನಿಧಿ
14	ಸದಸ್ಯರು	ಟಿಟಿಟಿಐ ನ ಪ್ರತಿನಿಧಿ

1) ಅಲ್ಲದೇ, ಅವಶ್ಯಕತೆ ಇದ್ದಾಗ ಕೈಗಾರಿಕೆಗಳ ಪ್ರತಿನಿಧಿಗಳನ್ನು ಆಹ್ವಾನಿಸಲು ಮತ್ತು ಗರಿಷ್ಠ ಇಬ್ಬರು ಗಣ್ಯ ವ್ಯಕ್ತಿ/ಸಂಸ್ಥೆಗಳನ್ನು ಆಹ್ವಾನಿಸಲು ಅವಕಾಶ ಕಲ್ಪಿಸಿದೆ.

2) ತನ್ನ ಪರವಾಗಿ ಸಭೆ ನಡೆಸಲು ಉಪಾಧ್ಯಕ್ಷರಿಗೆ ಅಧ್ಯಕ್ಷರು ಪ್ರಾಧಿಕಾರವನ್ನು ನೀಡಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಭಾನುಮತಿ (ಪ್ರ)

ಪೀಠಾಧಿಕಾರಿ,

ಪಿ.ಆರ್. 563 ಕಾರ್ಮಿಕ ಇಲಾಖೆ

(ಉದ್ಯೋಗ ಮತ್ತು ತರಬೇತಿ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ, ನಿಯೋಜನೆ ಮೇಲೆ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇವರ ವೃಂದ ಬದಲಾವಣೆಗೆ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ : 1. ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇವರ ಪತ್ರ ಸಂಖ್ಯೆ : ಕ.ಬಾ.ವಿ.ಅ.ಧಾ/ಆಡಳಿತ/2010–11/1094, ದಿನಾಂಕ 02–09–2010.

2. ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ, ನಿಯೋಜನೆ ಮೇಲೆ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇವರ ಮನವಿ ದಿನಾಂಕ 20–12–2010.

3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ : ಮಮಅಇ/ನಿಸಿಮೇ/18/09–10, ದಿನಾಂಕ 24–06–2010.

4. ಅಧ್ಯಕ್ಷರು, ವೈದ್ಯಕೀಯ ಮಂಡಳಿಯ ಪರೀಕ್ಷೆ, ಕೆ.ಸಿ. ಜನರಲ್ ಆಸ್ಪತ್ರೆ, ಇವರ ಪತ್ರ ಸಂಖ್ಯೆ : ಎಂ.ಬಿ.ಡಿ./244/2010–11, ದಿನಾಂಕ 13–01–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇವರ ದಿನಾಂಕ 02–09–2010ರ ಪತ್ರದಲ್ಲಿ ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ ಇವರು ಅಂಗವಿಕಲರಾಗಿದ್ದು, ಬಿ.ಎಸ್.ಸಿ., ಹೋಂ ಸೈನ್ಸ್ ಹಾಗೂ ಎಂ.ಎಸ್.ಡಬ್ಲ್ಯೂ. ಓದಿದ್ದು, ನಿಯೋಜನೆ ಮೇಲೆ, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ, ತಮ್ಮ ಮನವಿ ದಿನಾಂಕ 20–12–2010 ರಲ್ಲಿ ತಾವು ಅಂಗವಿಕಲರಾಗಿದ್ದು ಮೇಲ್ವಿಚಾರಕಿಯರು ಕರ್ತವ್ಯ ನಿಮಿತ್ತ ಹಳ್ಳಿಗಳಿಗೆ ಹೋಗಿ ಅಂಗನವಾಡಿ ಕೇಂದ್ರಗಳ ಭೇಟಿ ಮಾಡುವುದು ಕಷ್ಟ ಸಾಧ್ಯವಾದ್ದರಿಂದ ತನಗೆ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ವೃಂದ ಬದಲಾವಣೆ ಮಾಡಲು ಕೋರಿ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರಮಸಂಖ್ಯೆ (3)ರ ದಿನಾಂಕ 07–09–2009 ಮತ್ತು 24–06–2010ರ ಪತ್ರಗಳಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಇವರನ್ನು ಮೇಲ್ವಿಚಾರಕಿ ವೃಂದದ ನೇಮಕಾತಿ ನಿಯಮಗಳಂತೆ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ವೃಂದ ಬದಲಾವಣೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಸದರಿ ನೌಕರರು ಅಂಗವಿಲರಾಗಿದ್ದು, ಮಾನವೀಯತೆಯ ದೃಷ್ಟಿಯಿಂದ ಸರ್ಕಾರದಿಂದಲೇ ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಕೋರಲಾಗಿದ್ದು, ಮೇಲೆ ಓದಲಾದ ಕ್ರಮಸಂಖ್ಯೆ (4)ರ ವೈದ್ಯಕೀಯ ಮಂಡಳಿಯ ಪತ್ರದಲ್ಲಿ ಸದರಿ ನೌಕರರು ಪೋಲಿಯೋದಿಂದ ನರಳುತ್ತಿರುವುದರಿಂದ, ಹೆಚ್ಚು ದೂರ ನಡೆಯುವುದರಿಂದ ಮೆಟ್ಟಿಲು ಏರುವುದರಿಂದ ಇತ್ಯಾದಿಗಳಿಂದ ದೂರವಿರಬೇಕೆಂದು ಸಲಹೆ ನೀಡುವುದರೊಂದಿಗೆ ಮೇಜಿಗೆ ಸಂಬಂಧಿಸಿದ ಹಗುರ ಕೆಲಸ ಮಾಡಬೇಕೆಂದು ಅಭಿಪ್ರಾಯ ನೀಡಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ, ಇವರಿಗೆ ಮಾನವೀಯತೆ ಹಾಗೂ ವೈದ್ಯಕೀಯ ಕಾರಣಗಳ ಮೇರೆಗೆ ಮೇಲ್ವಿಚಾರಕಿ ವೃಂದದಿಂದ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಕರ್ನಾಟಕ ಸಿವಿಲ್ ಸೇವೆಗಳು, (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 16(ಎ)(iii) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಅನುಮತಿ ನೀಡಿ ಆದೇಶ ಹೊರಡಿಸಲು ನಿರ್ಧರಿಸಿದ್ದು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 630 ಎಸ್‌ಜಿಡಿ 2010, ಬೆಂಗಳೂರು, ದಿನಾಂಕ: 21–02–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಜಯಶ್ರೀ ಬಿ. ಮನ್ನಿಕೇರಿ, ಮೇಲ್ವಿಚಾರಕಿ (ನಿಯೋಜನೆ ಮೇಲೆ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ) ಇವರನ್ನು ಮೇಲ್ವಿಚಾರಕಿ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ವೈದ್ಯಕೀಯ ಕಾರಣಗಳ ಮೇರೆಗೆ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 16 (ಎ) (iii) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ವೃಂದ ಬದಲಾವಣೆಗೆ ಅನುಮತಿ ನೀಡಿ ಆದೇಶಿಸಿದೆ.

ಷರತ್ತುಗಳು

1. ವೃಂದ ಬದಲಾವಣೆ ಬಯಸುವ ನೌಕರರು ಸಕ್ರಮವಾಗಿ ನೇಮಕಾತಿ ಹೊಂದಿದ ಹುದ್ದೆಯ ಪರಿವೀಕ್ಷಣಾವಧಿಯನ್ನು ತೃಪ್ತಿಕರವಾಗಿ ಪೂರೈಸಿರತಕ್ಕದ್ದು.
2. ನೌಕರರು ಸ್ವಇಚ್ಛೆ ಮೇರೆಗೆ ಮಾಡುವ ವರ್ಗಾವಣೆ ಮೂಲಕ ನೇಮಕಾತಿಯಾಗಿರುವುದರಿಂದ ವರ್ಗಾವಣೆ ಮೂಲಕ ನೇಮಿಸಲಾಗುವ ವೃಂದದ ಹುದ್ದೆಯಲ್ಲಿ ಇವರ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಾವಳಿ 1975ರ ನಿಯಮ 6ರ ಮೂರನೆ ಪರಂತುಕದ ಅನುಸಾರ ನಿರ್ಧರಿಸತಕ್ಕದ್ದು. ಈ ಬಗ್ಗೆ ನೌಕರರ ಒಪ್ಪಿಗೆಯನ್ನು ಬರವಣಿಗೆ ಮೂಲಕ ಪಡೆಯತಕ್ಕದ್ದು.
3. ನೌಕರರು ವರ್ಗಾವಣೆ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ.

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಸದರಿಯವರಿಗೆ ಸೂಕ್ತ ಸ್ಥಳ ನಿಯುಕ್ತಿ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ.ಎಫ್‌ಡಿ 1 ಟಿಎಫ್‌ಸಿ 96 ದಿನಾಂಕ 10–07–1996 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಪಿ.ಆರ್. 564 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ 26 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : ಪೌನಿ/ತಾಂತ್ರಿಕ/ಬಳ್ಳಾರಿ/116 (ಭಾಗ–4)/09–10, ದಿನಾಂಕ 8–2–2011.
2. ಸರ್ಕಾರದ ಆದೇಶ ಸಂಖ್ಯೆ : ನಅಇ 167 ಎಸಿಬಿ 2010, ದಿನಾಂಕ 13–8–2010.
3. ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 167 ಎಸಿಬಿ 2010, ದಿನಾಂಕ 24–8–2010.
4. ಸರ್ಕಾರದ ಆದೇಶ ಸಂಖ್ಯೆ : ನಅಇ 54 ಎಬಿಸಿ 2010, ದಿನಾಂಕ 26–11–2010.
5. ಸರ್ಕಾರದ ಆದೇಶ ಸಂಖ್ಯೆ : ನಅಇ 43 ಎಬಿಸಿ 2010, ದಿನಾಂಕ 17–1–2011.
6. ಸರ್ಕಾರದ ಆದೇಶ ಸಂಖ್ಯೆ : ನಅಇ 54 ಎಬಿಸಿ 2010, ದಿನಾಂಕ 18–1–2011.
7. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 20 ಇಜಿವಿ 2009(4), ದಿನಾಂಕ 13–7–2009.

ಪ್ರಸ್ತಾವನೆ:

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ರೂ.100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ 26 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

2. ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ದಿನಾಂಕ 13–8–2010ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ 7 ಮಹಾನಗರ ಪಾಲಿಕೆಗಳಲ್ಲಿ 2ನೇ ಹಂತದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು 2011–12 ರಿಂದ 2013–14ರ ಆರ್ಥಿಕ ವರ್ಷಗಳಲ್ಲಿ ಪ್ರತಿ ಮಹಾನಗರ ಪಾಲಿಕೆಗೆ ತಲಾ ರೂ.100 ಕೋಟಿಯಂತೆ ವಿಶೇಷ ಅನುದಾನವನ್ನು ಒದಗಿಸಲು ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

3. ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ಸರ್ಕಾರದ ದಿನಾಂಕ 24–8–2010 ರ ಸುತ್ತೋಲೆಯಲ್ಲಿ ರಾಜ್ಯದಲ್ಲಿನ 7 ಮಹಾನಗರಪಾಲಿಕೆಗಳಲ್ಲಿ 2ನೇ ಹಂತದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡುವುದಕ್ಕೆ ಮತ್ತು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ.

4. ಮೇಲೆ ಕ್ರಮಾಂಕ (4) ರಲ್ಲಿ ಓದಲಾದ ಸರ್ಕಾರದ ದಿನಾಂಕ 26–11–2010 ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವು ಷರತ್ತುಗಳು ಮತ್ತು ಮೊತ್ತದ ಮಿತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

5. ಮೇಲೆ ಕ್ರಮಾಂಕ (5) ರಲ್ಲಿ ಓದಲಾದ ಸರ್ಕಾರದ ಆದೇಶ ಸಂಖ್ಯೆ : ನಅಇ 43 ಎಬಿಸಿ 2010, ದಿನಾಂಕ 17–1–2011 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ರೂ. 100 ಕೋಟಿ ಮೊತ್ತದ ಕಾಮಗಾರಿಗಳನ್ನು ಈ ಆರ್ಥಿಕ ವರ್ಷದಲ್ಲಿಯೇ ಕೈಗೆತ್ತಿಕೊಳ್ಳಲು ಮತ್ತು ರೂ.15 ಕೋಟಿ ಮೊತ್ತವನ್ನು ಕಾಮಗಾರಿಗಳ ತೃಪ್ತಿಕರ ಪ್ರಗತಿ ಪರಿಗಣಿಸಿ ಹಂತ ಹಂತವಾಗಿ 2010–11 ರ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಲು ಕೆಲವು ಷರತ್ತಿಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

6. ಮೇಲೆ ಕ್ರಮಾಂಕ (6) ರಲ್ಲಿ ಓದಲಾದ ದಿನಾಂಕ 18–1–2011ರ ಆದೇಶದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

7. ಮೇಲೆ ಕ್ರಮಾಂಕ (7) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಬಳ್ಳಾರಿ ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ ಮಹಾನಗರಪಾಲಿಕೆಗಳಲ್ಲಿ ರೂ. 10 ಲಕ್ಷಕ್ಕೆ ಮೀರಿದ ಎಲ್ಲಾ ರೀತಿಯ ಸಾರ್ವಜನಿಕ ಸಂಗ್ರಹಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಮುಖಾಂತರ ಕೈಗೊಳ್ಳುವಂತೆ ಆದೇಶಿಸಲಾಗಿದೆ.

8. ಈಗ ಸರ್ಕಾರದ ಹಂತದಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿ ಸಲ್ಲಿಸಿರುವ 26 ಕಾಮಗಾರಿಗಳು ಸರ್ಕಾರದಿಂದ ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಸೇರಿರುತ್ತವೆ. ಈ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಯಲ್ಲಿನ ಮೊತ್ತ ಮತ್ತು ಈಗ ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ. ಸಂ.	ಕ್ಷೇತ್ರ	ಕಾಮಗಾರಿಯ ಹೆಸರು	ಉದ್ದ ಕಿ.ಮೀ.	ಕ್ರಿಯಾ ಯೋಜನೆ ಮೊತ್ತ (ಲಕ್ಷ ರೂ.)	ಆಡಳಿತಾತ್ಮಕ ಅನುಮೋದನೆ ಕೋರಿರುವ ಮೊತ್ತ
		ಹೊಸ ಕಾಮಗಾರಿಗಳು ಪ್ಯಾಕೇಜ್–1			
1	93	ನಗರದ ದೋಬಿ ಬೀದಿ ಕೌಲ್ ಬಜಾರ್‌ಯಿಂದ ಬಂಡಿ ಹಟ್ಟಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	261.5	26341985.80
2	93	ನಗರದ ಜವಾರಿ ಬೀದಿ, ಕೌಲ್‌ಬಜಾರ್ ಮುಖ್ಯ ರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.65	189.97	15629382.50
3	93	ನಗರದ ಗಡಂಗ್ ಬೀದಿ, ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಹಳೇ ಮಾರುಕಟ್ಟೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	262.5	27262824.32
4	93	ನಗರದ ಕ್ರಿಶ್ಚಿಯನ್ ಸ್ಮಶಾನ, ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	212.83	28373766.64
5	93	ನಗರದ ಓ.ಪಿ.ಡಿ. ರಸ್ತೆ, ಓ.ಪಿ.ಡಿ. ವೃತ್ತದಿಂದ ಕೊಳಗಲ್ ರಸ್ತೆವರೆಗೆ (ಸುಧಾಕ್ರಾಸ್) ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.85	742.19	35894248.83
6	93	ನಗರದ ಟೈಲರ್ ಬೀದಿ 2ನೇ ಗೇಟ್‌ನಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.75	149.79	15299239.42
7	93	ನಗರದ ಬಂಡಿಹಟ್ಟಿ ರಸ್ತೆ ಬೆಳಗಲ್ ಕ್ರಾಸ್ ದಿಂದ ಬಂಟಿಹಟ್ಟಿ ಮುಖ್ಯೆ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1	285.49	28572483.90
8	93	ನಗರದ ಕೋಟೆ ಮುಖ್ಯ ರಸ್ತೆ, ರಿಬ್ಲಿಕ್ ವೃತ್ತದಿಂದ ರಾ.ಹೆ–63, ವಯಾ ಪಿ.ಡಬ್ಲ್ಯೂ.ಡಿ ಕಛೇರಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.3	404.73	38008113.24

9	93	ನಗರದ ಇನ್‌ಫೆಂಟ್ರಿ ರಸ್ತೆಯ, ಇನ್‌ಫೆಂಟ್ರಿ ಮುಖ್ಯ ರಸ್ತೆಯಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.4	348.85	36285745.58
10	93	ನಗರದ ದೊಡ್ಡಿ ಬೀದಿಯನ್ನು ರೇಡಿಯೊ ಪಾರ್ಕ್ ಮುಖ್ಯ ರಸ್ತೆಯಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.55	116.98	16369863.92
11	93	ನಗರದ ಮೋರ್‌ಗಲ್ಲಿ ಬೀದಿಯನ್ನು ಬಂಡಿಹಟ್ಟಿ ರಸ್ತೆಯಿಂದ ದೋಬಿ ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.2	220.27	27949305.02
ಬಿ		**93 ಕ್ಷೇತ್ರದ ಒಟ್ಟು ಮೊತ್ತ**	**11**	**3195.13**	**295986959.17**

ಕ್ರ. ಸಂ.	ಕ್ಷೇತ್ರ	ಕಾಮಗಾರಿಯ ಹೆಸರು	ಉದ್ದ ಕಿ.ಮೀ.	ಕ್ರಿಯಾ ಯೋಜನೆ ಮೊತ್ತ (ಲಕ್ಷ ರೂ.)	ಆಡಳಿತಾತ್ಮಕ ಅನುಮೋದನೆ ಕೋರಿರುವ ಮೊತ್ತ
		ಹೊಸ ಕಾಮಗಾರಿಗಳು ಪ್ಯಾಕೇಜ್–2			
1	94	ನಗರದ ಕಪ್ಪಗಲ್ ರಸ್ತೆಯನ್ನು ದುರ್ಗಮ್ಮ ವೃತ್ತದಿಂದ ಕೆನಾಲ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.5	442.36	55097902.09
2	94	ನಗರದ ಇಂದಿರಾ ನಗರ ರಸ್ತೆಯನ್ನು ಫೈರ್‌ಸ್ಟೇಷನ್ ವೃತ್ತದಿಂದ ಓ.ಪಿ.ಡಿ. ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.52	498.74	48874390.57
3	94	ನಗರದ ಬಾಂಬೆಪ್ರೆಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.62	179.08	18100106.78
4	94	ನಗರದ ಕಾಳಮ್ಮ ಬೀದಿಯನ್ನು ವೆಟರನರಿ ಆಸ್ಪತ್ರೆಯಿಂದ ಭಾರತ್ ಬಿಸ್ಕತ್ ಫ್ಯಾಕ್ಟರಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 775 ರಿಂದ 975 ವರೆಗೆ	0.2	78.64	7549057.13
5	94	ನಗರದ ತೇರು ಬೀದಿಯನ್ನು ದೊಡ್ಡ ಮಾರುಕಟ್ಟೆಯಿಂದ ಕನೇಕಲ್ ಬಸ್ ನಿಲ್ದಾಣದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 1000 ರಿಂದ 1440 ವರೆಗೆ	0.44	157.26	15569029.42
6	94	ನಗರದ ಹಳೇ ಧಾರವಾಡ ರಸ್ತೆಯಲ್ಲಿ ಕುಟ್ಟಿ ಹೋಟೆಲ್ ನಿಂದ ಫೈರ್ ಸ್ಟೇಷನ್ ವೃತ್ತದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.25	338.61	34639794.82
7	94	ನಗರದ ಗಾಂಧಿನಗರ 1ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆಯವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1	273.23	30764030.47
8	94	ನಗರದ ತಾಳೂರು ರಸ್ತೆಯನ್ನು ಪಾರ್ವತಿ ನಗರ ಮುಖ್ಯ ರಸ್ತೆಯಿಂದ ಮಹಾನಗರಪಾಲಿಕೆ ಹದ್ದಿನವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.75	861.61	93894803.05
9	94	ನಗರದ ಗಾಂಧಿನಗರ 3ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆ ವಯಾ ಬಾಲಭಾರತಿ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.83	216.37	24215776.16
10	94	ನಗರದ ನೆಹರೂ ಕಾಲೋನಿ 1ನೇ ಕ್ರಾಸ್ ರಸ್ತೆಯನ್ನು ಸಂಗನಕಲ್ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.65	203.6	20095023.67
11	94	ನಗರದ ಮುಲ್ಲಂಗಿ ಸಂಜೀವಪ್ಪ ಬೀದಿಯನ್ನು ತೇರು ಬೀದಿಯಿಂದ ರೂಪನಗುಡಿ ರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.55	161.8	19425687.03
12	94	ನಗರದ ಗೋಲ್ಡ್‌ಸ್ಮಿತ್ ಬೀದಿಯನ್ನು ಭಾರತ್ ಬಿಸ್ಕತ್ ಫ್ಯಾಕ್ಟರಿಯಿಂದ ಬಾಂಬೆಪ್ರೆಸ್ ರಸ್ತೆ ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.25	499.03	44275363.93
13	94	ನಗರದ ಕಮ್ಮಿಂಗ್ ರಸ್ತೆ ರೂಪನಗುಡಿ ರಸ್ತೆಯಿಂದ ತೇರು ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.5	119.23	13305847.50
14	94	ನಗರದ ಶಾಸ್ತ್ರೀ ನಗರ 1ನೇ ಕ್ರಾಸ್ ರಸ್ತೆಯನ್ನು ಎಸ್.ಪಿ. ವೃತ್ತದಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.9	239.16	24038467.31
15	94	ನಗರದ ಶಾಸ್ತ್ರೀ ನಗರ 2ನೇ ಕ್ರಾಸ್ ಅವಂಬಾವಿ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.4	106.47	11229873.15
ಸಿ		**94 ಕ್ಷೇತ್ರದ ಒಟ್ಟು ಮೊತ್ತ**		**4375.19**	**461075153.08**
		ಪ್ಯಾಕೇಜ್–1 + ಪ್ಯಾಕೇಜ್–2 **ಒಟ್ಟು ಮೊತ್ತ**			**757062112.25**

9) ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ತಮ್ಮ ಪ್ರಸ್ತಾವನೆಯಲ್ಲಿ ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ ಇವರು ಮೇಲ್ಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಿರುತ್ತಾರೆಂದು ತಿಳಿಸಿರುತ್ತಾರೆ.

ಅ) ಪ್ಯಾಕೇಜ್ ಸಂಖ್ಯೆ : 1ರ ಅಡಿಯಲ್ಲಿ ಬರುವ ಒಟ್ಟು 11 (ಹನ್ನೊಂದು) ರಸ್ತೆ ಕಾಮಗಾರಿಗಳನ್ನು ಹೊಸದಾಗಿ ಅಭಿವೃದ್ಧಿ ಪಡಿಸುವುದಾಗಿದ್ದು ಹಾಲಿ ಇರುವ ಹಳೆ ರಸ್ತೆಗಳನ್ನು ಅಗಲೀಕರಣ ಮಾಡಿ ಪೇವ್‌ಮೆಂಟ್ ಡಿಸೈನ್ ಪ್ರಕಾರ ಜಿ.ಎಸ್.ಬಿ., ಡಬ್ಲ್ಯೂ.ಎಂ.ಎಂ., ಡಿ.ಬಿ.ಎಂ. ಹಾಗೂ ಎಸ್.ಡಿ.ಬಿ.ಸಿ. ಹಾಗೂ ಅವಶ್ಯವಿರುವ ಕಡೆ ಬಿ.ಸಿ. ಅಳವಡಿಸಿ ಹೊಸದಾಗಿ ರಸ್ತೆ ನಿರ್ಮಾಣ ಮಾಡುವುದಾಗಿದೆ.

- ಸದರಿ ರಸ್ತೆಯ ಭಾಗದಲ್ಲಿ ಹೊಸದಾಗಿ ನೀರಿನ ಸಂಪರ್ಕ ವ್ಯವಸ್ಥೆ ಅಳವಡಿಸುವುದು.
- ಸದರಿ ರಸ್ತೆಯ ಭಾಗದಲ್ಲಿ ಅವಶ್ಯವಿರುವ/ಹಾಳಾಗಿರುವ ಒಳಚರಂಡಿ ಮಾರ್ಗಗಳನ್ನು ಮರು ಸಂಪರ್ಕ ಕಲ್ಪಿಸುವುದು.
- ಎರಡು ಕಡೆ ರಸ್ತೆ ಬದಿ ಚರಂಡಿ ನಿರ್ಮಾಣ ಹಾಗೂ ಅವಶ್ಯವಿರುವ ಸ್ಥಳಗಳಲ್ಲಿ ಬಾಕ್ಸ್ ಕಲ್ವರ್ಟ್ ನಿರ್ಮಾಣ ಮಾಡುವುದು ಸೇರಿರುತ್ತದೆ.
- ಎರಡು ಬದಿಯಲ್ಲಿ ಫುಟ್‌ಪಾತ್ ನಿರ್ಮಿಸುವುದು ಒಳಗೊಂಡಿರುತ್ತದೆ.
- ರಸ್ತೆ ಸಂಚಾರ ಫಲಕಗಳನ್ನು ಅಳವಡಿಸುವುದು ಸೇರ್ಪಡೆಯಾಗಿರುತ್ತದೆ.
- ರಸ್ತೆಯ ಭಾಗದಲ್ಲಿ ದಾರಿ ದೀಪಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲಿನ ಹನ್ನೊಂದು ರಸ್ತೆ ನಿರ್ಮಾಣ ಕಾಮಗಾರಿಗಳಲ್ಲಿ ಒಂದು ರಸ್ತೆಯನ್ನು ಚತುಷ್ಪಥ ಎರಡು ರಸ್ತೆಯನ್ನು ತ್ರಿಪಥ ಹಾಗೂ ಎಂಟು ರಸ್ತೆಗಳನ್ನು ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವುದನ್ನು ಒಳಗೊಂಡಿರುತ್ತದೆ.

ಆ) ಪ್ಯಾಕೇಜ್ ಸಂಖ್ಯೆ : 2ರ ಅಡಿಯಲ್ಲಿ ಬರುವ ಒಟ್ಟು 15 (ಹದಿನೈದು) ರಸ್ತೆ ಕಾಮಗಾರಿಗಳನ್ನು ಹೊಸದಾಗಿ ಅಭಿವೃದ್ಧಿ ಪಡಿಸುವುದಾಗಿದ್ದು ಹಾಲಿ ಇರುವ ಹಳೆ ರಸ್ತೆಗಳನ್ನು ಅಗಲೀಕರಣ ಮಾಡಿ ಇದರಲ್ಲಿ ಪೇವ್‌ಮೆಂಟ್ ಡಿಸೈನ್ ಪ್ರಕಾರ ಜಿ.ಎಸ್.ಬಿ., ಡಬ್ಲ್ಯೂ.ಎಂ.ಎಂ., ಡಿ.ಬಿ.ಎಂ. ಹಾಗೂ ಅವಶ್ಯವಿರುವ ಕಡೆ ಬಿ.ಸಿ. ಅಳವಡಿಸಿ ಹೊಸದಾಗಿ ರಸ್ತೆ ನಿಮಾಣ ಮಾಡುವುದಾಗಿದೆ.

- ಸದರಿ ರಸ್ತೆಯ ಭಾಗದಲ್ಲಿ ಹೊಸದಾಗಿ ನೀರಿನ ಸಂಪರ್ಕ ವ್ಯವಸ್ಥೆ ಅಳವಡಿಸುವುದು.
- ಸದರಿ ರಸ್ತೆಯ ಭಾಗದಲ್ಲಿ ಅವಶ್ಯವಿರುವ/ಹಾಳಾಗಿರುವ ಒಳಚರಂಡಿ ಮಾರ್ಗಗಳನ್ನು ಮರು ಕಲ್ಪಿಸುವುದು.
- ಎರಡು ಕಡೆ ರಸ್ತೆ ಬದಿ ಚರಂಡಿ ನಿರ್ಮಾಣ ಅವಶ್ಯವಿರುವ ಸ್ಥಳಗಳಲ್ಲಿ ಬಾಕ್ಸ್ ಕಲ್ವರ್ಟ್ ನಿರ್ಮಾಣ.
- ಎರಡು ಬದಿಯಲ್ಲಿ ಫುಟ್‌ಪಾತ್ ನಿರ್ಮಿಸುವುದು.
- ರಸ್ತೆ ಸಂಚಾರ ಫಲಕಗಳನ್ನು ಅಳವಡಿಸುವುದು ಹಾಗೂ ದಾರಿ ದೀಪಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.
- ಎರಡು ಬದಿಯ ಫುಟ್‌ಪಾತ್ ನಿರ್ಮಿಸುವುದು.
- ರಸ್ತೆಯ ಸಂಚಾರ ಫಲಕಗಳನ್ನು ಅಳವಡಿಸುವುದು ಸೇರ್ಪಡೆಯಾಗಿರುತ್ತದೆ.
- ರಸ್ತೆಯ ಭಾಗದಲ್ಲಿ ದಾರಿ ದೀಪಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.

10) ಪ್ರತಿಯೊಂದು ರಸ್ತೆ ಕಾಮಗಾರಿಗಳ ಮಣ್ಣಿನ ಗುಣ ಪರೀಕ್ಷೆ ಮಾಡಿಸಿ, ಪೇವಮೆಂಟ್ ಡಿಜೈನ್ ಪ್ರಕಾರ ಸಿದ್ದಪಡಿಸಿ, ನಿಖರವಾದ ಅಂದಾಜನ್ನು ತಯಾರಿಸಿದ್ದರಿಂದ ಸದರಿ 26 ರಸ್ತೆ ಕಾಮಗಾರಿಗಳ ಪ್ರತಿಯೊಂದು ಅಂದಾಜು ಪಟ್ಟಿಗಳ ಮೌಲ್ಯವು ಅನುಮೋದಿತ ಕ್ರಿಯಾ ಯೋಜನೆಯ ಮೌಲ್ಯಕ್ಕಿಂತ ಅಲ್ಪ ಬದಲಾವಣೆ ಹೊಂದಿರುತ್ತದೆ. ಆದರೆ ಈಗ ಸಿದ್ದಪಡಿಸಿರುವ ಅಂದಾಜು ಮೊತ್ತವು ಒಟ್ಟಾರೆ ಅನುಮೋದಿತ ಕ್ರಿಯಾ ಯೋಜನೆಯ ಮೊತ್ತವಾದ ರೂ.7570.32 ಲಕ್ಷಗಳಿಗೆ ಸಮನಾಗಿರುತ್ತದೆಂದು ತಿಳಿಸಲಾಗಿದೆ.

11) ಮುಂದುವರೆದು ಒಟ್ಟಾರೆ 26 ರಸ್ತೆ ಕಾಮಗಾರಿಗಳ ಅಂದಾಜು ವೆಚ್ಚದ ಪಟ್ಟಿಯನ್ನು ಬಳ್ಳಾರಿ ಲೋಕೋಪಯೋಗಿ ವೃತ್ತದ 2010–11ನೇ ಸಾಲಿನ ದರಪಟ್ಟಿಯ ಪ್ರಕಾರ ತಯಾರಿಸಿದ್ದನ್ನು ಮುಖ್ಯ ಅಭಿಯಂತರರು ಸಂಪರ್ಕ ಮತ್ತು ಕಟ್ಟಡಗಳು (ಉ) ಧಾರವಾಡ ಇವರು ತಾಂತ್ರಿಕವಾಗಿ ಪರಿಶೀಲನೆ ಮಾಡಿ ತಾಂತ್ರಿಕ ಪರಿಶೀಲನಾ ಪತ್ರದ ಸಂಖ್ಯೆ : ಮುಇಂ (ಉ)/ತಾಂಸ/3/ಸಅ–1/ಬವಿ/10–11, ದಿನಾಂಕ 27–01–2010 ರಲ್ಲಿ ದೃಢೀಕರಣ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

12) ಮುಂದುವರೆದು, ಮೇಲ್ಕಂಡ ಕಾಮಗಾರಿಗಳ ಬಾಬ್ತು ರೂ.7570.32 ಲಕ್ಷಗಳ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರು ತಮ್ಮ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

13) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 13 ಎಬಿಸಿ 2011, ಬೆಂಗಳೂರು, ದಿನಾಂಕ: 23ನೇ ಫೆಬ್ರವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಈ ಕೆಳಕಂಡ 26 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅವುಗಳ ಹೆಸರಿನ ಎದುರಿಗೆ ನಮೂದಿಸಿರುವ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ :

ಕ್ರ. ಸಂ.	ಕ್ಷೇತ್ರ	ಕಾಮಗಾರಿಯ ಹೆಸರು	ಉದ್ದ ಕಿ.ಮೀ.	ಮೊತ್ತ ರೂ.ಗಳಲ್ಲಿ
		ಹೊಸ ಕಾಮಗಾರಿಗಳು ಪ್ಯಾಕೇಜ್–1		
1	93	ನಗರದ ದೋಬಿ ಬೀದಿ ಕೌಲ್ ಬಜಾರ್‌ಯಿಂದ ಬಂಡಿ ಹಟ್ಟಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	2,63,41,985.80
2	93	ನಗರದ ಜವಾರಿ ಬೀದಿ, ಕೌಲ್‌ಬಜಾರ್ ಮುಖ್ಯ ರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.65	1,56,29,382.50

3	93	ನಗರದ ಗಡಂಗ್ ಬೀದಿ, ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಹಳೇ ಮಾರುಕಟ್ಟೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	2,72,62,824.32
4	93	ನಗರದ ಕ್ರಿಶ್ಚಿಯನ್ ಸ್ಮಶಾನ, ಕೌಲ್ ಬಜಾರ್ ಮುಖ್ಯ ರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.1	2,83,73,766.64
5	93	ನಗರದ ಓ.ಪಿ.ಡಿ. ರಸ್ತೆ, ಓ.ಪಿ.ಡಿ. ವೃತ್ತದಿಂದ ಕೊಳಗಲ್ ರಸ್ತೆವರೆಗೆ (ಸುಧಾಕ್ರಾಸ್) ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.85	3,58,94,248.83
6	93	ನಗರದ ಟೈಲರ್ ಬೀದಿ 2ನೇ ಗೇಟ್‌ನಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.75	1,52,99,239.42
7	93	ನಗರದ ಬಂಡಿಹಟ್ಟಿ ರಸ್ತೆ ಬೆಳಗಲ್ ಕ್ರಾಸ್ ದಿಂದ ಬಂಟಿಹಟ್ಟಿ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1	2,85,72,483.90
8	93	ನಗರದ ಕೋಟೆ ಮುಖ್ಯ ರಸ್ತೆ, ರಿಬ್ಲಿಕ್ ವೃತ್ತದಿಂದ ರಾ.ಹೆ–63, ವಯಾ ಪಿ.ಡಬ್ಲ್ಯೂಡಿ ಕಛೇರಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.3	3,80,08,113.24
9	93	ನಗರದ ಇನ್‌ಫೆಂಟ್ರಿ ರಸ್ತೆಯ, ಇನ್‌ಫೆಂಟ್ರಿ ಮುಖ್ಯ ರಸ್ತೆಯಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.4	3,62,85,745.58
10	93	ನಗರದ ದೋಡ್ಡಿ ಬೀದಿಯನ್ನು ರೇಡಿಯೊ ಪಾರ್ಕ್ ಮುಖ್ಯ ರಸ್ತೆಯಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.55	1,63,69,863.92
11	93	ನಗರದ ಮೋರ್‌ಗಲ್ಲಿ ಬೀದಿಯನ್ನು ಬಂಡಿಹಟ್ಟಿ ರಸ್ತೆಯಿಂದ ದೋಬಿ ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.2	2,79,49,305.02
ಬಿ		**93 ಕ್ಷೇತ್ರದ ಒಟ್ಟು ಮೊತ್ತ**	**11**	**29,59,86,959.17**
		ಹೊಸ ಕಾಮಗಾರಿಗಳು ಪ್ಯಾಕೇಜ್–2		
1	94	ನಗರದ ಕಪ್ಪಗಲ್ ರಸ್ತೆಯನ್ನು ದುರ್ಗಮ್ಮ ವೃತ್ತದಿಂದ ಕೆನಾಲ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.5	5,50,97,902.09
2	94	ನಗರದ ಇಂದಿರಾ ನಗರ ರಸ್ತೆಯನ್ನು ಫೈರ್‌ಸ್ಟೇಷನ್ ವೃತ್ತದಿಂದ ಓ.ಪಿ.ಡಿ. ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.52	4,88,74,390.57
3	94	ನಗರದ ಬಾಂಬೆಪ್ರೆಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.62	1,81,00,106.78
4	94	ನಗರದ ಕಾಳಮ್ಮ ಬೀದಿಯನ್ನು ವೆಟರನರಿ ಆಸ್ಪತ್ರೆಯಿಂದ ಭಾರತ್ ಬಿಸ್ಕತ್ ಫ್ಯಾಕ್ಟರಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 775 ರಿಂದ 975 ವರೆಗೆ	0.2	75,49,057.13
5	94	ನಗರದ ತೇರು ಬೀದಿಯನ್ನು ದೊಡ್ಡ ಮಾರುಕಟ್ಟೆಯಿಂದ ಕನೇಕಲ್ ಬಸ್ ನಿಲ್ದಾಣದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 1000 ರಿಂದ 1440 ವರೆಗೆ	0.44	1,55,69,029.42
6	94	ನಗರದ ಹಳೇ ಧಾರವಾಡ ರಸ್ತೆಯಲ್ಲಿ ಕುಟ್ಟಿ ಹೋಟೆಲ್ ನಿಂದ ಫೈರ್ ಸ್ಟೇಷನ್ ವೃತ್ತದ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.25	3,46,39,794.82
7	94	ನಗರದ ಗಾಂಧಿನಗರ 1ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆಯವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1	3,07,64,030.47
8	94	ನಗರದ ತಾಳೂರು ರಸ್ತೆಯನ್ನು ಪಾರ್ವತಿ ನಗರ ಮುಖ್ಯ ರಸ್ತೆಯಿಂದ ಮಹಾನಗರಪಾಲಿಕೆ ಹದ್ದಿನವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.75	9,38,94,803.05
9	94	ನಗರದ ಗಾಂಧಿನಗರ 3ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆ ವಯಾ ಬಾಲಭಾರತಿ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.83	2,42,15,776.16
10	94	ನಗರದ ನೆಹರೂ ಕಾಲೋನಿ 1ನೇ ಕ್ರಾಸ್ ರಸ್ತೆಯನ್ನು ಸಂಗನಕಲ್ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.65	2,00,95,023.67
11	94	ನಗರದ ಮುಲ್ಲಂಗಿ ಸಂಜೀವಪ್ಪ ಬೀದಿಯನ್ನು ತೇರು ಬೀದಿಯಿಂದ ರೂಪನಗುಡಿ ರಸ್ತೆ ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.55	1,94,25,687.03
12	94	ನಗರದ ಗೋಲ್ಡ್‌ಸ್ಮಿತ್ ಬೀದಿಯನ್ನು ಭಾರತ್ ಬಿಸ್ಕತ್ ಫ್ಯಾಕ್ಟರಿಯಿಂದ ಬಾಂಬೆಪ್ರೆಸ್ ರಸ್ತೆ ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.25	4,42,75,363.93
13	94	ನಗರದ ಕಮ್ಮಿಂಗ್ ರಸ್ತೆ ರೂಪನಗುಡಿ ರಸ್ತೆಯಿಂದ ತೇರು ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.5	1,33,05,847.50
14	94	ನಗರದ ಶಾಸ್ತ್ರೀ ನಗರ 1ನೇ ಕ್ರಾಸ್ ರಸ್ತೆಯನ್ನು ಎಸ್.ಪಿ. ವೃತ್ತದಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.9	2,40,38,467.31

15	94	ನಗರದ ಶಾಸ್ತ್ರೀ ನಗರ 2ನೇ ಕ್ರಾಸ್ ಅವಂಬಾವಿ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.4	1,12,29,873.15
ಸಿ		**94 ಕ್ಷೇತ್ರದ ಒಟ್ಟು ಮೊತ್ತ**		**46,10,75,153.08**
		ಪ್ಯಾಕೇಜ್–1 + ಪ್ಯಾಕೇಜ್–2 **ಒಟ್ಟು ಮೊತ್ತ**		**75,70,62,112.25**

(ಒಟ್ಟಾರೆ ಮೊತ್ತ ರೂಪಾಯಿ ಎಪ್ಪತ್ತೈದು ಕೋಟಿ ಎಪ್ಪತ್ತು ಲಕ್ಷ ಅರವತ್ತೆರಡು ಲಕ್ಷದ ಒಂದು ನೂರ ಹನ್ನೆರಡು ಮತ್ತು ಪೈಸೆ ಇಪ್ಪತ್ತೈದು ಮಾತ್ರ)

2) ಈ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ :

ಅ) ಮೇಲೆ ಹೇಳಲಾದ 2ನೇ ಪ್ಯಾಕೇಜ್‌ನಲ್ಲಿನ ಕ್ರಮಸಂಖ್ಯೆ (1) ಮತ್ತು (8)ರ ಕಾಮಗಾರಿಗಳ ಅಂದಾಜು ವೆಚ್ಚ ರೂ.500 ಲಕ್ಷಕ್ಕಿಂತ ಹೆಚ್ಚಿಗೆ ಇರುವುದರಿಂದ ಅವುಗಳಿಗೆ ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ ಪ್ರಕಾರ ಸಚಿವ ಸಂಪುಟ ಅನುಮೋದನೆ ಅವಶ್ಯಕವಿರುವುದರಿಂದ ಈ ಕಾಮಗಾರಿಗಳಿಗೆ ವಿವರವಾದ ಅಂದಾಜು ಪಟ್ಟಿ ತಯಾರಿಸಿ ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು.

ಆ) ಪ್ರತಿ ಕಾಮಗಾರಿಯ ವೆಚ್ಚ ಮೇಲ್ಕಂಡ ಅನುಮೋದಿತ ಮೊತ್ತಕ್ಕಿಂತ ಯಾವುದೇ ಕಾರಣಕ್ಕೂ ಹೆಚ್ಚಾಗಬಾರದು.

ಇ) ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಮೊದಲು ಪ್ರತಿ ಕಾಮಗಾರಿಗೆ ಸಂಬಂಧಿಸಿದಂತೆ ವಿವರವಾದ ಅಂದಾಜು ಪಟ್ಟಿ ತಯಾರಿಸಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು ಮತ್ತು ಅವುಗಳ ಅನುಮೋದಿತ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ) ಈ ಅನುದಾನದ ಅಡಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿ ರಚಿಸಿರುವ ನಿಯಮಗಳು ಮತ್ತು ಹೊರಡಿಸಲಾದ ಸೂಚನೆಗಳಲ್ಲಿನ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 20 ಇಜಿವಿ 2009 (4), ದಿನಾಂಕ 13–7–2009 ರಲ್ಲಿನ ಎಲ್ಲಾ ಅಂಶಗಳನ್ನು ಮತ್ತು ಕಟ್ಟುನಿಟ್ಟಾಗಿ ಪಾಲಿಸಿ ಟೆಂಡರ್ ಪ್ರಕ್ರಿಯೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳುವುದು.

ಉ) ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವುದು.

ಊ) ಅನುಮೋದಿತ ಅಂದಾಜು ಪಟ್ಟಿಯಲ್ಲಿನ ಕಾಮಗಾರಿಯ ಯಾವುದೇ ಐಟಂಗಳನ್ನು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಬದಲಾವಣೆ ಮಾಡುವಂತಿಲ್ಲ.

ಋ) ಕಾಮಗಾರಿಯ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಮೂರನೇ ತಂಡದಿಂದ ತಪಾಸಣೆ ನಡೆಸಿ ವರದಿ ಪಡೆದುಕೊಳ್ಳತಕ್ಕದ್ದು.

3) ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಆಇ 1 ಟಿಎಫ್‌ಪಿ 2008, ದಿನಾಂಕ 16–5–2008 ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಆರ್. ಮಹೇಶ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಮಹಾನಗರ ಪಾಲಿಕೆ–2)

ಪಿ.ಆರ್. 565

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ವಿ. ವೆಂಕಟ್ರಮಣ, ಪತ್ರಾಂಕಿತ ಉಪ ಖಜಾನಾಧಿಕಾರಿ, ಉಪ ಖಜಾನೆ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ ಇವರ ಮೇಲಿನ ಟ್ರ್ಯಾಪ್ ಪ್ರಕರಣದಲ್ಲಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ: ಲೋಕ್/ಐಎನ್‌ವಿ(ಜಿ)/ಎಂ–38/ಸಿಆರ್–13/2010, ಮಂಗಳೂರು, ದಿ: 27–12–2010.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ಕೇಶವಮೂರ್ತಿ, ಸಿ.ಜೆ. ಬಿನ್ ಲೇಟ್ ಗುರುರಾಜಪ್ಪ, ಸರ್ಕಾರಿ ವಸತಿ ನಿಲಯ, ಹಳೇ ಸ್ಟೇಷನ್ ಕಡಬ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ತಂದೆ ಶಿಕ್ಷಕರಾಗಿದ್ದು ದಿನಾಂಕ 16–8–2010 ರಂದು ನಿಧನರಾಗಿದ್ದು, ಇವರಿಗೆ ಸಂಬಂಧಿಸಿದ ಜಿ.ಪಿ.ಎಫ್. ಮತ್ತು ಡಿ.ಸಿ.ಆರ್.ಜಿ. ಹಣದ ಚೆಕ್ ನೀಡಲು ಶ್ರೀ ವಿ. ವೆಂಕಟ್ರಮಣ, ಪತ್ರಾಂಕಿತ ಉಪ ಖಜಾನಾಧಿಕಾರಿ, ಉಪ ಖಜಾನೆ, ಪುತ್ತೂರು ಇವರು ಲಂಚ ನೀಡುವಂತೆ ಕೋರಿದ್ದು ಲಂಚ ನೀಡಲು ಇಷ್ಟವಿಲ್ಲದ ಕಾರಣ ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದು ಈ ದೂರನ್ನು ಆಧರಿಸಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರು ಏರ್ಪಡಿಸಿದ ಟ್ರ್ಯಾಪ್‌ನಲ್ಲಿ ಶ್ರೀ ವಿ. ವೆಂಕಟ್ರಮಣ, ಪತ್ರಾಂಕಿತ ಉಪ ಖಜಾನಾಧಿಕಾರಿ, ಉಪ ಖಜಾನೆ, ಪುತ್ತೂರು, ಇವರು ತಮ್ಮ ಕಚೇರಿಯಲ್ಲಿ ಫಿರ್ಯಾದಿಯಿಂದ ರೂ.2500/– ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದು, ನಿಯಮಾನುಸಾರ ತನಿಖಾ ಕ್ರಮದ ನಂತರ ಇವರ ಮೇಲಿನ ಭ್ರಷ್ಟಾಚಾರ ಆಪಾದನೆಯು ಮೇಲ್ನೋಟಕ್ಕೆ ಸಾಭೀತಾಗಿರುತ್ತದೆಯೆಂದು ತಿಳಿಸಿ, ಸದರಿ ಅಧಿಕಾರಿಯವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ಹಸ್ತಕ್ಷೇಪ ಮಾಡುವ ಸಾಧ್ಯತೆಗಳಿರುವುದರಿಂದ ಇವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಅವರ ಲೀನ್ (ಸ್ಥಾನಮಾನ) ಬೇರೆ ಕಡೆಗೆ ವರ್ಗಾಯಿಸಲು ಕೋರಿರುತ್ತಾರೆ.

ಪ್ರಸ್ತಾವವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 7 ಆಖಇ 2011, ಬೆಂಗಳೂರು, ದಿನಾಂಕ: 7–02–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ವಿ. ವೆಂಕಟ್ರಮಣ, ಪತ್ರಾಂಕಿತ ಉಪ ಖಜಾನಾಧಿಕಾರಿ, ಉಪ ಖಜಾನೆ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಇವರನ್ನು ಅಮಾನತ್ತಿನಲ್ಲಿಡಲಾಗಿದೆ.

ಅಮಾನತ್ತಿನಲ್ಲಿರುವ ಅವಧಿಯಲ್ಲಿ ಶ್ರಿ ವಿ. ವೆಂಕಟ್ರಮಣ, ಪತ್ರಾಂಕಿತ ಉಪ ಖಜಾನಾಧಿಕಾರಿ, ಉಪ ಖಜಾನೆ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ ಇವರು ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿ ಪಡೆಯದೆ ತಮ್ಮ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಶ್ರೀನಿವಾಸಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡ).

ಪಿ.ಆರ್. 566

ENERGY SECRETARIAT

SUB : Transfer of 8.00 MW Biomass based Power Plant from M/s. Mandya Biomass Power Company Private Limited to M/s. Bhoruka Power Corporation Limited-reg.

READ :
1. Government Letter No. DE 176 NCE 2001 dated : 21-01-2002.
2. Government Letter No. DE 176 NCE 2001 dated : 03-09-2002.
3. Letter No. KRED/03/BPCL/2011/588 dated : 10/14-02-2011 received from the Managing Director, Karnataka Renewable Energy Development Limited, Bangalore.

PREAMBLE :

In the Government Letter read at (1) above, Government has given “No Objection” for setting of 4.5 MW Biomass based Power Plant to M/s Mandya Biomass Power Company Private Limited at Krishnarajapet, Mandya District.

In the Government Letter read at (2) above, the capacity of the Biomass Power Plant has been enhanced from 4.5 MW to 8.00 MW capacity.

In the Letter read at (3) above, as per the request of the developer the Managing Director, Karnataka Renewable Energy Development Limited, Bangalore has recommended for transfer of the Project of 8.00 MW capacity of Biomass based Power Plant from M/s Mandya Biomass Power Company Private Limited to M/s. Bhoruka Power Corporation Limited since M/s Mandya Biomass Power Company Private Limited is not in a position to implement the project.

The proposal has been examined in detail and hence the following order :

GOVERNMENT ORDER No. EN 81 NCE 2011, BANGALORE, DATED : 23-02-2011

Government accords approval for transfer of 8.00 MW Biomass based Power Plant from M/s Mandya Biomass Power Company Private Limited to M/s. Bhoruka Power Corporation Limited subject to the following conditions :

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments /Organizations such as Forest Department, Revenue Department & Karnataka State Pollution Control Board, etc., for the Power plant.
4. The Detailed Project Report (D.P.R.) for the power plant shall be got approved by Karntakaka Renewable Energy Development Limited, before the commencement of the power plant.

”

By Order and in the name of the Governor of Karnataka
SURESH B. KRISHNAPPANAVAR,
Under Secretary to Government,
Energy Department.

P.R. No. 567

ಸಹಕಾರ ಸಚಿವಾಲಯ

ವಿಷಯ : ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ 2008–09 ಮತ್ತು 2009–10 ನೇ ಸಾಲುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸಲು ಕಾಲಾವಕಾಶ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಒ 04 ಸಸಕಾ 2010, ದಿನಾಂಕ: 07.05.2010 ಮತ್ತು 04.08.2010.

2. ದಿ ಮಾರ್ಕಂಡೇಯ ಸಹಕಾರ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ ಅಧ್ಯಕ್ಷರ ಪತ್ರ ಸಂಖ್ಯೆ: ಎಂಸಿಎಸ್ಎಂ/ವಾ.ಮ.ಸಭೆ/2010–11/107, ದಿನಾಂಕ: 11.01.2011.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ 2008–09 ಮತ್ತು 2009–10ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 31.03.2011ರ ಒಳಗಾಗಿ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣ 27(1)ರ ಉಪಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇವರು ತಮ್ಮ ಪತ್ರದಲ್ಲಿ ಕಾರ್ಖಾನೆಯ ಕೆಲಸವನ್ನು ಪೂರ್ತಿಗೊಳಿಸಲು ಅವಶ್ಯವಿರುವ ರೂ.22.43 ಕೋಟಿಗಳ ಅವಧಿ ಸಾಲವನ್ನು ಎನ್.ಸಿ.ಡಿ.ಸಿ ನವದೆಹಲಿ ಇವರು ಬಿಡುಗಡೆ ಮಾಡಿದ್ದು, ಕಾರ್ಖಾನೆಯ ವತಿಯಿಂದ ರೂ.8.49 ಕೋಟಿ ಪಾಲು ಬಂಡವಾಳವನ್ನು ಸಂಗ್ರಹಿಸಬೇಕಾಗಿದ್ದು ಈ ಕೆಲಸದಲ್ಲಿ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯನಿರತರಾಗಿರುವುದರಿಂದ 2008–09 ಮತ್ತು 2009–10ನೇ ಸಾಲುಗಳ ವಾರ್ಷಿಕ ಮಹಾಸಭೆಗಳನ್ನು ಇನ್ನು ಆರು ತಿಂಗಳ ಅವಧಿಗೆ ಅಂದರೆ ದಿ:30.09.2011ರ ಒಳಗಾಗಿ ಜರುಗಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 04 ಸಸಕಾ 2011, ದಿನಾಂಕ: 15.02.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ ಇದರ 2008–2009 ಹಾಗೂ 2009–10ನೇ ಸಾಲುಗಳ ವಾರ್ಷಿಕ ಮಹಾಸಭೆಯನ್ನು ದಿನಾಂಕ: 30.09.2011ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಗಳನ್ನು ಮಾರ್ಪಾಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30.09.2011ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಕಲಂನ ಉಪಬಂಧಗಳು ಪುನ: ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್ 594

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಗ್ರೂಫ್–ಎ ಹುದ್ದೆಗಳ ಸೃಜನೆ ಹಾಗೂ ಉನ್ನತೀಕರಣದ ಬಗ್ಗೆ

ಓದಲಾಗಿದೆ: ಕಡತ ಸಂಖ್ಯೆ ಸಿಆಸುಇ 02 ಅಕಾಅ 2010.

ಪ್ರಸ್ತಾವನೆ:

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಹುದ್ದೆಗಳಲ್ಲಿ ಅಧಿಕಾರಿಗಳು ದೀರ್ಘಾವಧಿ ಸೇವೆ ಸಲ್ಲಿಸಿದ್ದರೂ ಮುಂಬಡ್ತಿ ಪಡೆಯಲು ವಿಳಂಬವಾಗುತ್ತಿದೆಯೆಂದು ಹಾಗೂ ಸರ್ಕಾರದ ಹಲವು ಹೊಸ ವಿವಿಧ ನವೀನ ಕಾರ್ಯಕ್ರಮಗಳಿಂದಾಗಿ ಹಲವಾರು ಇಲಾಖೆಗಳಲ್ಲಿ ಕೆಲಸದ ಒತ್ತಡ ಹೆಚ್ಚಾಗಿದ್ದು, ಪರಿಣಾಮಕಾರಿಯಾಗಿ ನಿಗಧಿತ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲು ಕಷ್ಟ ಸಾಧ್ಯವಾಗಿರುತ್ತದೆ. ಆದ್ದರಿಂದ ಸಚಿವಾಲಯದ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವುದರಿಂದ ಕೆಲಸದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲು ಹಾಗೂ ಜಟಿಲವಾದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಾಗುವುದು ಎಂಬ ಬಗ್ಗೆ ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರಾಂಕಿತ ಅಧಿಕಾರಿಗಳ ಸಂಘದ ಮನವಿಯನ್ನು ಪರಿಶೀಲಿಸಿ, ಈ ಬಗ್ಗೆ ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು.ಇ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅಪರ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಉಪಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಜಿಸುವ ಬಗ್ಗೆ ಕಾರ್ಯಾಧ್ಯಯನ ನಡೆಸಿ ವರದಿ ನೀಡುವಂತೆ ಸಿ.ಆ.ಸು.ಇ.(ಆಡಳಿತ ಸುಧಾರಣಾ–ಕಾರ್ಯಾಧ್ಯಯನ) ವಿಭಾಗವನ್ನು ಕೋರಲಾಗಿತ್ತು.

ಮೇಲೆ ಓದಲಾದ ಉಲ್ಲೇಖಿತ ಕಡತದಲ್ಲಿ ಸಿ.ಆ.ಸು.ಇ (ಆಡಳಿತ ಸುಧಾರಣಾ–ಕಾರ್ಯಾಧ್ಯಯನ) ವಿಭಾಗವು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ವಿವಿಧ ಇಲಾಖೆಗಳಲ್ಲಿ ಕಾರ್ಯಾಧ್ಯಯನ ನಡೆಸಿ ಅಪರ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಉಪಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ವೃಂದಗಳಲ್ಲಿ ಒಟ್ಟು 17 ಹುದ್ದೆಗಳ ಸೃಜನೆ ಹಾಗೂ 6 ಹುದ್ದೆಗಳ ಉನ್ನತೀಕರಣ ಮತ್ತು ವಿವಿಧ ಕ್ಷೇತ್ರೀಯ ಇಲಾಖೆ / ನಿಗಮ / ಮಂಡಳಿ

/ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿನ 26 ಹುದ್ದೆಗಳನ್ನು ಸಚಿವಾಲಯದ ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ವೃಂದಕ್ಕೆ ಮೀಸಲಿಡಲು (Encadre) ಶಿಫಾರಸ್ಸು ಮಾಡಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 458 ಸಅಸೇ 2008 ಬೆಂಗಳೂರು, ದಿನಾಂಕ 25ನೇ ಫೆಬ್ರವರಿ 2011.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಬಾಕಿಯಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕೃಷಿ ಇಲಾಖೆಯಲ್ಲಿ ಒಂದು ಹುದ್ದೆ ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಒಂದು ಹುದ್ದೆ ಒಟ್ಟು 2 ಜಂಟಿ ಕಾರ್ಯದರ್ಶಿ ಹುದ್ದೆಗಳನ್ನು ಸೃಜಿಸಲಾಗಿದೆ.

ಕಂದಾಯ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳಲ್ಲಿನ ಈ ಕೆಳಕಂಡ ಉಪಕಾರ್ಯದರ್ಶಿ ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಜಂಟಿ ಕಾರ್ಯದರ್ಶಿ ವೃಂದಕ್ಕೆ ಉನ್ನತೀಕರಿಸಲಾಗಿದೆ.

ಸರ್ಕಾರದ ಉಪಕಾರ್ಯದರ್ಶಿ, ಕಂದಾಯ ಇಲಾಖೆ
(ಭೂಸ್ವಾಧೀನ, ಪುನರ್ವಸತಿ ಮತ್ತು ಭೂದಾಖಲೆಗಳು)
ವಿಶೇಷಾಧಿಕಾರಿ ಮತ್ತು ಸರ್ಕಾರದ ಉಪಕಾರ್ಯದರ್ಶಿ, ಕಾರ್ಮಿಕ ಇಲಾಖೆ
(ಬಾಲ ಕಾರ್ಮಿಕ ಕೋಶ)
ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸೇವೆಗಳು)

2) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 136: ವೆಚ್ಚ–12: 2011, ದಿನಾಂಕ 14–2–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇಲಾಖೆ (ಸೇವೆಗಳು–3)

ಪಿ.ಆರ್ 595

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ.ಎಚ್.ಪೂಜಾರ್ ಕೆ.ಎ.ಎಸ್ (ನಿ) ಅಧಿಕಾರಿ ಹಾಗೂ ಇವರ ವಿರುದ್ಧ ಇಲಾಖಾ ವಿಚಾರಣೆ–ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ: ಸಿಆಸುಇ 148 ಎಸ್ಇಎನ್ 04 ದಿ:27–09–06.
2. ವಿಚಾರಣಾಧಿಕಾರಿಗಳ ವರದಿ ದಿ: 01–07–2008
3. ಎರಡನೇ ಕಾರಣ ಕೇಳುವ ನೋಟೀಸ್ ದಿ: 22–08–2008
4. ಎರಡನೇ ಕಾರಣ ಕೇಳುವ ನೋಟೀಸಿಗೆ ಉತ್ತರ ದಿ: 04–09–2008
5. ಸರ್ಕಾರದ ಪತ್ರ ಸಂ: ಸಿಆಸುಇ 166 ಕೆಇವಿ 07 ದಿ: 26–08–2010
6. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ ಇವರ ಪತ್ರ ದಿ:08–12–2010

ಪ್ರಸ್ತಾವನೆ:

ಶ್ರೀ ಬಿ. ಎಚ್. ಪೂಜಾರ್ ಕೆ.ಎ.ಎಸ್ (ನಿ) ಅಧಿಕಾರಿ ಇವರು ಹಾವೇರಿ ಉಪ ವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಬ್ಯಾಡಗಿ ತಾಲ್ಲೂಕು ಶಿಡೆನೂರು ಗ್ರಾಮದ ರಿ.ಸ.ನಂ 408/1 + 2 ಬಿ ರಲ್ಲಿನ ಜಮೀನೊಂದರಲ್ಲಿನ ಕೊಳವೆ ಬಾವಿಗೆ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ವಿದ್ಯುತ್ ಸಂಪರ್ಕ ಪರವಾನಗಿ ನೀಡಿರುವುದು ಹಾಗೂ ಹಾವೇರಿ ಪುರಸಭೆಯ ವ್ಯಾಪ್ತಿಯ ಶಾಲೆಗಳ ಸ್ಕೂಲ್ ಬ್ಯಾಗ್ ಖರೀದಿಯಲ್ಲಿ ನಡೆದ ಅವ್ಯವಹಾರದ ಸಂಬಂಧ ಸ್ಥಳ ತನಿಖೆ ಮಾಡದೇ ಮೇಲಾಧಿಕಾರಿಗಳ ಸೂಚನೆಗಳನ್ನು ಉಲ್ಲಂಘಿಸಿ ಸುಳ್ಳು ವರದಿ ನೀಡುವುದರ ಮೂಲಕ ತೀವ್ರ ಸ್ವರೂಪದ ದುರ್ನಡತೆಯನ್ನು ಎಸಗಿರುವ ಆರೋಪದ ಸಂಬಂಧ ಇವರ ವಿರುದ್ಧ ವಿಚಾರಣೆ ನಡೆಸಲು ಮೇಲೆ ಕ್ರಮ ಸಂ (1)ರಲ್ಲಿ ಓದಲಾದ ದಿ: 27–09–2006ರ ಆದೇಶದಲ್ಲಿ ಶ್ರೀ ಎಂ. ಎನ್. ಗದಗ್, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂ (2) ರಲ್ಲಿ ಓದಲಾದ ದಿ: 01–07–2008 ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿ ಶ್ರೀ ಬಿ. ಎಚ್.ಪೂಜಾರ್ ಕೆ.ಎ.ಎಸ್ ಅಧಿಕಾರಿ ಇವರ ವಿರುದ್ಧ ಮಾಡಲಾದ ಎರಡು ಆರೋಪಗಳು ಸಾಬೀತಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ.

ವಿಚಾರಣಾ ವರದಿಯನ್ನು ದಾಖಲೆಗಳೊಂದಿಗೆ ಪರಿಶೀಲಿಸಿ ವಿಚಾರಣಾ ವರದಿಯಲ್ಲಿ ತಿಳಿಸಿರುವಂತೆ ಆಪಾದಿತರ ವಿರುದ್ಧ ಮಾಡಲಾದ 2 ಆರೋಪಗಳು ಸಾಬೀತಾಗಿದ್ದು ಇವುಗಳು ಗಂಭೀರವಾದ ಆಡಳಿತಾತ್ಮಕ ಲೋಪದೋಷಗಳಿರುವ ಪ್ರಕರಣಗಳು ಆಗಿರುತ್ತವೆ. ಕೊಳವೆ ಬಾವಿಗಳ ಅಂತರ್ಜಲವನ್ನು ಸೂಕ್ತ ರೀತಿಯಲ್ಲಿ ಕಾಪಾಡುವ ದೃಷ್ಟಿಯಿಂದ ಸರ್ಕಾರವು 2003 ರಲ್ಲಿ ಜಾರಿಗೆ ತಂದಿರುವ ಅಧಿನಿಯಮದನ್ವಯ 2 ಕೊಳವೆ ಬಾವಿಗಳ ನಡುವೆ ಕನಿಷ್ಠ 500 ಮೀಟರ್‌ಗಳ ಅಂತರ ಇರಬೇಕೆಂದು ಸೂಚಿಸಲಾಗಿದ್ದರೂ ಅಪಾದಿತ ಅಧಿಕಾರಿರವರು ತಮ್ಮ ಅಧೀನಾಧಿಕಾರಿಯಾದ ತಹಸಿಲ್ದಾರ್ ರವರ ಪ್ರಸ್ತಾವನೆಯನ್ನು ಪರಿಶೀಲಿಸದೇ ಅರ್ಜಿದಾರರಿಗೆ ಕೊಳವೆ ಬಾವಿ ತೋಡಲು ಅನುಮತಿ ಕೊಡುವಂತೆ ನಿರ್ದೇಶನ ಕೊಟ್ಟಿರುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆ. ಹಾಗೂ ಪುರಸಭೆಯಲ್ಲಿ ಬ್ಯಾಗ್ ಖರೀದಿಯಲ್ಲಿ ಅವ್ಯವಹಾರ ನಡೆದಿದ್ದು, ಅದರ ಬಗ್ಗೆ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸೂಕ್ತ ತನಿಖೆ ನಡೆಸಿ ಆರೋಪಿತ ಅಧಿಕಾರಿಗಳನ್ನು ಗುರುತಿಸಿ ಅವರ ವಿರುದ್ದ ತನಿಖೆಗೆ ಶಿಫಾರಸ್ಸು ಮಾಡಬೇಕಿತ್ತು. ಆದರೆ ಸದರಿಯವರು ತಮ್ಮ ನಿರ್ಲಕ್ಷತೆಯಿಂದ ಖುದ್ದು ತನಿಖೆ ಮಾಡದೇ ಕೆಳಹಂತದ ನೌಕರರ ವರದಿಯನ್ನಾಧರಿಸಿ ಸಾಂಧರ್ಬಿಕ ವರದಿ ಸಲ್ಲಿಸಿರುತ್ತಾರೆ. ಈ ಕಾರಣಗಳಿಂದಾಗಿ

ಆರೋಪಿತ ಅಧಿಕಾರಿ ಎರಡನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಲಿಖಿತ ಅಹವಾಲಿನಲ್ಲಿ ಅವರನ್ನು ಆರೋಪಮುಕ್ತಗೊಳಿಸಲು ಪರಿಗಣಿಸುವಂತಹ ಯಾವುದೇ ಅಂಶಗಳು ಕಂಡುಬಂದಿಲ್ಲದಿರುವುದರಿಂದ ಆಪಾದಿತರು ವಿಚಾರಣಾ ವರದಿಯನ್ನು ಔಪಚಾರಿಕವಾಗಿ ವಿರೋಧಿಸುತ್ತಿದ್ದಾರೆಂದು ಮನಗಂಡು ವಿಚಾರಣಾ ವರದಿಯನ್ನು ಒಪ್ಪಿಕೊಳ್ಳಲು ಸರ್ಕಾರವು ತೀರ್ಮಾನಿಸಿದೆ.

ಮೇಲ್ಕಂಡಂತೆ ಆರೋಪಿತರಾದ ಶ್ರೀ ಬಿ.ಎಚ್.ಪೂಜಾರ್, ನಿವೃತ್ತ ಕೆ.ಎ.ಎಸ್ ಅಧಿಕಾರಿ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರ ನಿವೃತ್ತಿ ವೇತನದಲ್ಲಿ ಮಾಹೆಯಾನ ರೂ:200/– ಗಳನ್ನು 1 ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಣಯಿಸಿ, ಅದರಂತೆ ಮೇಲೆ ಓದಲಾದ ಕ್ರಮ ಸಂ: (5)ರ ಪತ್ರದಲ್ಲಿ ಈ ಪ್ರಸ್ತಾವನೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿ ಕೋರಲಾಗಿತ್ತು. ಇದಕ್ಕೆ ಉತ್ತರವಾಗಿ ಮೇಲೆ ಓದಲಾದ ಕ್ರಮ ಸಂ:(6) ರ ಪತ್ರದಲ್ಲಿ ಸರ್ಕಾರವು ವಿಧಿಸಲು ಉದ್ದೇಶಿಸಿರುವ ದಂಡನೆಯನ್ನು ವಿಧಿಸಬಾರದೆಂದು ಕರ್ನಾಟಕ ಲೋಕ ಸೇವಾ ಆಯೋಗವು ನೀಡಿರುವ ಅಭಿಪ್ರಾಯವನ್ನು ಒಪ್ಪಿಕೊಳ್ಳದೇ ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 148 ಎಸ್ಇಎನ್ 2004(ಸಿಆಸುಇ 166 ಕೆಇವಿ 2007), ಬೆಂಗಳೂರು, ದಿನಾಂಕ: 26ನೇ ಫೆಬ್ರವರಿ 2011.

ಪ್ರಸ್ತಾವನೆಯನ್ನು ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀ.ಬಿ.ಎಚ್. ಪೂಜಾರ್ ನಿವೃತ್ತ ಕೆ.ಎ.ಎಸ್ ಅಧಿಕಾರಿ ಇವರಿಗೆ ಇವರ ನಿವೃತ್ತಿ ವೇತನದಲ್ಲಿ ಪ್ರತಿ ಮಾಹೆಯಾನ ರೂ.200/– (ಎರಡು ನೂರು ರೂಪಾಯಿಗಳು ಮಾತ್ರ) ಗಳನ್ನು 1 ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ವಾಸುದೇವಮೂರ್ತಿ

ಪಿ.ಆರ್ 596

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ಯುವಜನ ಸೇವಾ ಸಚಿವಾಲಯ

ವಿಷಯ : ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಅವರ ಉಪಯೋಗಕ್ಕಾಗಿ ಹೊಸ ವಾಹನವನ್ನು ಖರೀದಿಸಲು ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಅವರ ಪತ್ರ ಸಂಖ್ಯೆ: ಕಕ್ರೀಪ್ರಾ ಸಿ–3/18/2010–11, ದಿ:01.2.2011.

ಪ್ರಸ್ತಾವನೆ:

ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಅವರು ಮೇಲೆ ಓದಲಾದ ದಿನಾಂಕ: 01.02.2011ರ ಪತ್ರದಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀ ಗಿರೀಶ್ ಪಟೇಲ್ ಅವರ ಉಪಯೋಗಕ್ಕಾಗಿ ಹೊಸ ವಾಹನವನ್ನು ಖರೀದಿಸುವ ಅವಶ್ಯಕತೆ ಇರುವುದರಿಂದ 11.00 ಲಕ್ಷಗಳ ವೆಚ್ಚದಲ್ಲಿ ಹೊಸ ಕಾರನ್ನು ಖರೀದಿಸಲು ಸರ್ಕಾರದ ಮಂಜೂರಾತಿ ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 30 ಸಮನ 2011, ಬೆಂಗಳೂರು, ದಿನಾಂಕ: 24.02.2011.

ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು ಅವರ ಉಪಯೋಗಕ್ಕಾಗಿ ಸರ್ಕಾರಿ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 68 ಶಿವಾನೀ 2008, ದಿನಾಂಕ: 22.08.2008ರಲ್ಲಿ ನಿಗಧಿಪಡಿಸಿರುವಂತೆ ರೂ.11.00 ಲಕ್ಷಗಳ ಮಿತಿಯಲ್ಲಿ ಹೊಸ ವಾಹನವನ್ನು ಖರೀದಿಸಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಖರೀದಿಗೆ ತಗಲುವ ವೆಚ್ಚವನ್ನು 2010–11ನೇ ಆರ್ಥಿಕ ವರ್ಷದ ಲೆಕ್ಕಶೀರ್ಷಿಕೆ 2204–00–104–0–29 ಸಹಾಯಾನುದಾನ (101) ಯೋಜನೆ ಇದರ ಅಡಿಯಲ್ಲಿ ನಿಗಧಿಪಡಿಸಿದ ಅನುದಾನದಲ್ಲಿಯೇ ಭರಿಸತಕ್ಕದ್ದು.

ಹಳೆಯ ವಾಹನವು ಸರ್ಕಾರದ ಆದೇಶದ ಪ್ರಕಾರ ನಿಗದಿತ ಕಿಲೋ ಮೀಟರ್ ದೂರವನ್ನು ಕ್ರಮಿಸಿದ್ದಲ್ಲಿ ಹಾಗೂ ಷರತ್ತುಗಳನ್ನು ಪೂರೈಸಿದ್ದಲ್ಲಿ ನಿಯಮಾನುಸಾರ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ದೃಢೀಕರಣ ಪತ್ರ ಪಡೆದು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಪಿ.ಆರ್ 597

ಸರ್ಕಾರದ ಅಧೀನ ಕಾರ್ಯದರ್ಶಿ

ಯುವಜನ ಸೇವಾ ಇಲಾಖೆ.

ಯುವಜನ ಸೇವಾ ಸಚಿವಾಲಯ

ತಿದ್ದೋಲೆ

